ಇ) ಮೇಲ್ಕಂಡ ಸೀಟುಗಳಲ್ಲಿರುವ ಮ್ಯಾನೇಜ್‌ಮೆಂಟ್ ಕೋಟಾ ಹಾಗೂ ಸರ್ಕಾರಿ ಕೋಟಾ ಎಷ್ಟು?

ಈ) ಇಂಜಿನಿಯರಿಂಗ್ ಕಾಲೇಜು ತೆರೆಯಲು ಸರ್ಕಾರಕ್ಕೆ ಮನವಿಗಳು ಬಂದಿದೆಯೆ?

ಉ) ಹಾಗಿದ್ದಲ್ಲಿ ಇನ್ನೂ (ಈ ವರ್ಷದಲ್ಲಿ) ಎಷ್ಟು ಕಾಲೇಜುಗಳಿಗೆ ಅನುಮತಿ ಕೊಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು)

ಅ) 1) ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು 5

2) ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು 46

ಒಟ್ಟು 51

ಆ) 16,772

ಇ) 1990-91ನೇ ಸಾಲಿನಲ್ಲಿ

1) ಮೆರಿಟ್ ಕೋಟಾ (ಸರ್ಕಾರಿ ಕೋಟಾ) 6,275

2) ಆಡಳಿತ ಮಂಡಳಿ ಕೋಟಾ 10.497

ಒಟ್ಟು 16,772

ಈ) ಬಂದಿಲ್ಲ

ಉ) ಉದ್ಭವಿಸುವುದಿಲ್ಲ.

ಆಂಗ್ಲ ಶಿಕ್ಷಣ ತಜ್ಞರ ಸಮಿತಿಯ ಬಗ್ಗೆ

310 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಂಗ್ಲ ಮಾಧ್ಯಮ ಶಾಲೆಗಳ ಅನುಮತಿ ಕೊಡುವ ಸಂಬಂಧದಲ್ಲಿ ಸರ್ಕಾರಕ್ಕೆ ಸೂಕ್ತ ಮಾರ್ಗದರ್ಶನ ನೀಡಲು ಶಿಕ್ಷಣ ತಜ್ಞರ ಸಮಿತಿಯೊಂದನ್ನು ರಚಿಸಲಾಗಿರುವುದೇ?

ಆ) ಸರ್ಕಾರಿ ಆದೇಶದಂತೆ ಈ ಸಮಿತಿಯು ತನ್ನ ವರದಿಯನ್ನು ಒಂದು ತಿಂಗಳೊಳಗೆ ಕೊಟ್ಟಿದೆಯೇ?

ಇ) ಕೊಟ್ಟಿದ್ದಲ್ಲಿ ಈ ವರದಿಯ ಆಧಾರದ ಮೇಲೆ ಸರ್ಕಾರಿ ಕೈಗೊಂಡಿರುವ ಕ್ರಮಗಳೇನು?

ಈ) ಈ ಸಮಿತಿಯ ವರದಿಯ ಮುಖ್ಯಾಂಶಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು)

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

ಶಿವಮೊಗ್ಗ ಬಸ್‌ನಿಲ್ದಾಣದ ಕಾರ್ಯ ಸ್ಥಗಿತ

1163 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?